## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಗುರುಗೋವಿಂದ್ ಸಿಂಗ್‌ರವರ 350ನೇ ಜನ್ಮದಿನಚಾರಣೆ ಅಂಗವಾಗಿ ವಿವಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಹಾಗೂ ಬೀದರ್‌ನಲ್ಲಿ ಸಾಂಸ್ಕೃತಿಕ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ.

**ಉಲ್ಲೇಖ:**
1. 2017-18ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ:220-(5)
2. ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ ಇವರ ಪ್ರಸ್ತಾವನೆ ಸಂಖ್ಯೆ: ಅಸಂನಿ/ ಸಿಆರ್-483/ 2016-17. ದಿನಾಂಕ: 31.03.2017

-*~*~*~*~*

<u>ಪ್ರಸ್ತಾವನೆ:-</u>

ಸನ್ಮಾನ್ಯ ಮುಖ್ಯಮಂತ್ರಿಯವರು ಮೇಲೆ ಓದಲಾದ (1)ರಲ್ಲಿನ 2017-18ನೇ ಸಾಲಿನ ಆಯವ್ಯಯ ಭಾಷಣದ **ಕಂಡಿಕೆ: 220-5ರಲ್ಲಿ** ಈ ಕೆಳಕಂಡಂತೆ ಘೋಷಿಸಿರುತ್ತಾರೆ.

> **"ಗುರುಗೋವಿಂದ್ ಸಿಂಗ್‌ರವರ 350ನೇ ಜನ್ಮ ದಿನಾಚರಣೆ ಅಂಗವಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಹಾಗೂ ಸಿಖ್ ಸಮುದಾಯದ ಸಂಸ್ಕೃತಿಕ ಮತ್ತು ಪರಂಪರೆ ಸಂರಕ್ಷಿಸಲು ಬೀದರ್‌ನಲ್ಲಿ ಸಾಂಸ್ಕೃತಿಕ ಕೇಂದ್ರವನ್ನು ಸ್ಥಾಪಿಸಲು 5 ಕೋಟಿ ರೂ. ಅನುದಾನ ಒದಗಿಸಲಾಗುವುದು"**

ಶ್ರೀ ಗುರುಗೋವಿಂದ್ ಸಿಂಗ್‌ಜಿರವರು ಅವರ ತಂದೆಯಾದ ಶ್ರೀ ಗುರುಪೇತ್ ಬಹದೂರ್‌ರವರು ದೈವಾಧೀನರಾದ ನಂತರ 10ನೇ ಸಿಖ್ ಪಂಥದ ಗುರುವಾಗಿದ್ದರು ಇವರು 1666ರಲ್ಲಿ ಶ್ರೀ ಗುರುಗೋವಿಂದ್ ರಾಯ್‌ಯಾಗಿ ಪಂಜಾಬಿನಲ್ಲಿ ಜನ್ಮ ತಾಳಿದ್ದು. ಸದರಿ ಸಂತರು **"ಪಂಥ್"** ಎಂಬ ಸಮುದಾಯವನ್ನು ರೂಪಿಸಿ ಸಾಮಾಜಿಕ ನ್ಯಾಯ ಶಾಂತಿ, ಸಮಾನತೆಯನ್ನು ಮನುಕುಲಕ್ಕೆ ಪರಿಚಯಿಸಿದರು. ಇವರು **"ಬೈಸಾಕಿ"** ಹಬ್ಬದ ಆಚರಣೆಯನ್ನು ಸಿಖ್ ಸಮುದಾಯದವರಿಗೆ ಪರಿಚಯಿಸಿ 29.03.1676ರಿಂದ ಆಚರಣೆಯನ್ನು ಪ್ರಾರಂಭಿಸಿ ಹೊಸ ಸಿಖ್ ಪದ್ಧತಿಗೆ ನಾಂದಿಹಾಡಿದ್ದರು. ಇವರು ಪ್ರತಿಷ್ಠಿತ ಧಸಂ ಗ್ರಂಥ್ ಎಂಬ ಗ್ರಂಥವನ್ನು ಪ್ರಕಟಿಸಿ, ಜಾಬ್ ಸಹೀಬ್, ಅಮೃತ್ ಸವಹಿ ಮತ್ತು ಬೇಂಟಿ ಚೌಪ್ಪೈ ಎಂಬ ಪುಸ್ತಕಗಳನ್ನು ರಚಿಸಿದ್ದರು.

ಶ್ರೀ ಗುರುಗೋವಿಂದ್ ಸಿಂಗ್‌ಜಿರವರ ಭಾವಾರ್ಥವಾಗಿ ಇವರ ಶಿಶ್ಯರಾದ ಭಾಯ್ ಸಾಹೇಬ್‌ಸಿಂಗ್‌ಜಿರವರು ಕರ್ನಾಟಕ ರಾಜ್ಯದ ಬೀದರ್ ಜಿಲ್ಲೆಯಲ್ಲಿ **"ನಾನಾಕ್ ಜಾರ"** ಗುರುದ್ವಾರವನ್ನು ಸ್ಥಾಪಿಸಿದರು. ಪ್ರಸ್ತುತ ಇದು ರಾಷ್ಟ್ರದಲ್ಲಿನ ಸಿಖ್ ಸಮುದಾಯದ ಪವಿತ್ರ ಕ್ಷೇತ್ರವಾಗಿದೆ.

ಸಿಖ್ ಸಮುದಾಯವರು ಪ್ರಸ್ತುತ ಶ್ರೀ ಗುರುಗೋವಿಂದ್ ಸಿಖ್‌ಜಿರವರ 350ನೇ ಜನ್ಮದಿನಾಚರಣೆಯನ್ನು ಧಾರ್ಮಿಕವಾಗಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಿ ಸದರಿ ಜನ್ಮದಿನಾಚರಣೆಯನ್ನು ಆಚರಿಸಲು (ಪ್ರಕಾಶ ಉತ್ಸವ್) ಉದ್ದೇಶಿಸಿದ ಹಾಗೂ